## ಸಮುದ್ರ ಮಥನ

### ಕೆಜಿಎಫ್‌ನ ಸ್ಥಿತಿಗತಿ

'ಸುವರ್ಣ ಸ್ವಪ್ನ ಕೆ.ಜಿ.ಎಫ್.', ಎನ್. ಉದಯಕುಮಾರ್, ವಿಜಯ್ ಜೋಷಿ ಅವರ ಮುಖಪುಟ ಲೇಖನ (ಸುಧಾ, ಡಿ. 27) ಅಲ್ಲಿನ ರಾಜ ವೈಭೋಗದಿಂದ ಹಿಡಿದು ದುರಂತ ಸ್ಥಿತಿಯವರೆಗಿನ ವಿವರಗಳನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದೆ. ಈ ಕಾರ್ಖಾನೆಯ ನೌಕರರು ಇಂದು ಸಂಕಷ್ಟದಲ್ಲಿದ್ದಾರೆ. ಚಿನ್ನದ ಕಾರ್ಖಾನೆ ಮುಚ್ಚಲು ಕಾರಣ, ಸಿಗುವ ಚಿನ್ನವನ್ನು ಸಂಸ್ಕರಿಸಲು ಬೇಕಾಗುವ ವೆಚ್ಚ ಚಿನ್ನದ ಬೆಲೆಗಿಂತ ಜಾಸ್ತಿಯಾಗಿದೆ. ಇದರ ಜತೆಗೆ ಐ.ಟಿ.ಐ., ಎಚ್.ಎಂ.ಟಿ. ವಾಚ್ ಫ್ಯಾಕ್ಟರಿ, ಎನ್.ಜಿ.ಇ.ಎಫ್, ವಿ.ಎಸ್.ಎಲ್. ಮುಂತಾದ ಕಂಪನಿಗಳು ಸಹ ಕೆ.ಜಿ.ಎಫ್.ನ ಸ್ಥಿತಿಗೆ ಬಂದು ನಿಂತಿವೆ.

—ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ,
ಮಧುರಾ ಸುಬ್ರಹ್ಮಣ್ಯ ಬೆಂಗಳೂರು,
ಮೈ. ಸತೀಶ್‌ಕುಮಾರ್ ಬಂಗಾರಪೇಟೆ

### ದೇಶಕ್ಕೆ ಮಾದರಿಯಾಗಿದ್ದ ಸ್ಥಳ

ಕನ್ನಡಿಗರ ಭಾಗ್ಯನಿಧಿ ಕೋಲಾರ ಚಿನ್ನದ ಗಣಿಯಲ್ಲಿ ಮತ್ತೆ ಗಣಿ ಕೆಲಸ ಪ್ರಾರಂಭವಾಗುವ ಸೂಚನೆ ಇದೆ ಎಂಬ ಸುದ್ದಿಯ ಜೊತೆಗೆ, ಕೆ.ಜಿ.ಎಫ್. ಚಿತ್ರ ತೆರೆಗೆ ಬಂದಿರುವ ಬಗ್ಗೆ ಮುಖಪುಟದಲ್ಲಿ ಬರೆದ ಲೇಖನ ಖುಷಿ ತಂದಿತು. ಸ್ಥಳೀಯ ಮಾಹಿತಿಗಳನ್ನು ಇನ್ನೂ ವಿವರವಾಗಿ ತಿಳಿಸಬಹುದಿತ್ತು. ಅದು ಉನ್ನತ ಸ್ಥಿತಿಯಲ್ಲಿದ್ದಾಗ ಅಲ್ಲಿ ಜರುಗುತ್ತಿದ್ದ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳು ಇಡೀ ರಾಷ್ಟ್ರಕ್ಕೇ ಮಾದರಿಯಂತಿದ್ದವು. ಇದನ್ನು ನಾನು ಅಲ್ಲಿ ಬಹಳ ವರ್ಷ ಕಾಲ ಇದ್ದಾಗ ಕಣ್ಣಾರೆ ಕಂಡಿದ್ದೇನೆ. ಜತೆಗೆ ಲೇಖನದಲ್ಲಿ ಅಲ್ಲಿಯ ಪ್ರಸಿದ್ಧ ಮುಖ್ಯ ಸ್ಥಳ ರಾಬರ್ಟ್‌ಸನ್‌ಪೇಟೆ—ಆಂಡರ್‌ಸನ್‌ಪೇಟೆಯ ಉಲ್ಲೇಖವೇ ಇಲ್ಲ. ಇನ್ನು ಚಿತ್ರಗಳಲ್ಲಿ ಅಲ್ಲಿಯ ಅಪರೂಪದ ಅವಶೇಷಗಳಾಗಿ ಭದ್ರವಾಗಿ ಉಳಿದಿರುವ ಕೆಲವು ಸ್ಥಳಗಳನ್ನು ತೋರಿಸಬಹುದಾಗಿತ್ತು.

—ಎ.ಕೆ. ಅನಂತಮೂರ್ತಿ, ಬೆಂಗಳೂರು

### ಕಲಾತ್ಮಕ ತೊಟ್ಟಿಲು

'ಕಲಘಟಗಿ ತೊಟ್ಟಿಲಾಗ ಕಂದಮ್ಮ ನಗುತಾದ...' (ಇ.ಎಸ್. ಸುಧೀಂದ್ರಪ್ರಸಾದ್) ಲೇಖನ ಚೆನ್ನಾಗಿತ್ತು. ದೇಶ ವಿದೇಶಗಳಲ್ಲಿ ಭಾರೀ ಮನ್ನಣೆ ಗಳಿಸಿರುವ, ಉತ್ತಮ ಗುಣಮಟ್ಟ ಹಾಗೂ ಪೌರಾಣಿಕ ಚಿತ್ತಾರ ಸಹಿತ ರೂಪುಗೊಳ್ಳುವ, 6 ತಲೆಮಾರುಗಳ ಇತಿಹಾಸ ಹೊಂದಿರುವ ತೊಟ್ಟಿಲುಗಳ ಜನಪ್ರಿಯತೆ ಪರಿಚಯಿಸಿದ ಲೇಖನ ಈ ತೊಟ್ಟಿಲುಗಳನ್ನು ತೂಗಿದಷ್ಟೇ ಖುಷಿಕೊಟ್ಟಿತು.

—ಪಿ. ಜಯವಂತ ಪೈ, ಕುಂದಾಪುರ, ಟಿ.ಎಸ್.
ಪದ್ಮನಾಭರಾವ್ ಬೆಂಗಳೂರು,
ಅರವಿಂದ ಜಿ. ಜೋಷಿ ಮೈಸೂರು

### ಸೊಗಸಾಗಿತ್ತು

'ಗಣಿತ ತಾರೆ ರಾಮಾನುಜನ್', ಶ್ರೀನಿವಾಸ




ರಾಮಾನುಜನ್ ಅವರ ಬಗೆಗಿನ ಲೇಖನ (ಬಾಲಾಜಿ ಟಿ.ಆರ್.) ಸೊಗಸಾಗಿತ್ತು.

—ಡಾ. ಕೆ.ಕೆ. ಜಯಚಂದ್ರಗುಪ್ತ,
ಹಾಸನ, ಟಿ.ಎಂ. ಮಾನಪ್ಪ,
ಶಿವಮೊಗ್ಗ

### ಕಥೆ ಚೆನ್ನಾಗಿದೆ

'ಅಲ್ಲೊಂದು ಅಂಗಡಿ' (ಪ್ರೇಮಾ ಭಟ್) ಕಥೆ ಚೆನ್ನಾಗಿದೆ. ಬಹಳ ದಿನಗಳ ನಂತರ ಪ್ರೇಮಾ ಭಟ್ ಕಥೆ ಓದಲು ಸಿಕ್ಕಿದ್ದು ಖುಷಿಯಾಯಿತು.

—ರಾಜಶೇಖರ ಹಾದಿಮನಿ
ಧಾರವಾಡ, ಕೊಹಿಮ ಬಸರಕೋಡು

### ಜಂಕ್‌ಫುಡ್ ಸಮಸ್ಯೆ

'ನಿಮ್ಮೊಡನೆ'ಯಲ್ಲಿ 'ಜಂಕ್‌ಫುಡ್‌ಗೆ ವಿದಾಯ ಹೇಳುವ ಸಮಯ' (ರಘುನಾಥ. ಚ.ಹ.) ಬರಹ ಸಕಾಲಿಕ. ಮಕ್ಕಳು ಎದುರಿಸುತ್ತಿರುವ ಬೊಜ್ಜು, ಸ್ಥೂಲಕಾಯ ಸಮಸ್ಯೆ ಕುರಿತಂತೆ ವಿವರಗಳು ಸಮರ್ಪಕವಾಗಿವೆ.

—ಬಿ. ಮನೋಹರ, ಚಳ್ಳಕೆರೆ, ಕಾಳೀಹುಂಡಿ
ಶಿವಕುಮಾರ್ ಮೈಸೂರು

### ಅರ್ಥಪೂರ್ಣ

'ವಿಚಾರ ಲಹರಿ' 'ಹಸ್ತಕ ಮಸ್ತಕ' (ಪುರಂಜೀವಿ) ಬರಹ ಅರ್ಥಪೂರ್ಣವಾಗಿದೆ.

—ರುಕ್ಮಿಣಿ ಕೃ. ದೇಶಪಾಂಡೆ ಗೋಕಾಕ

### ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾದ್ದು

'ಮಕ್ಕಳಲ್ಲಿ ಹೋಲಿಕೆ ಬೇಡ' (ಲಾವಣ್ಯ ಗೌರಿ ವೆಂಕಟೇಶ್) ಲೇಖನದ ವಿಷಯ ಪ್ರತಿಯೊಬ್ಬ ಹೆತ್ತವರ ತಿಳಿದುಕೊಳ್ಳಬೇಕಾದ ಸಂಗತಿ. ತಮ್ಮ ಮಕ್ಕಳನ್ನು ಬೇರೆ ಮಕ್ಕಳೊಡನೆ ಹೋಲಿಸುವುದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಕುಗ್ಗುವುದರೊಡನೆ ಮತ್ತಷ್ಟು ಮಂಕಾಗುವ ಸಾಧ್ಯತೆ ಇರುತ್ತದೆ.

—ವಿಭಾ ಮುರಳೀಧರ್ ತುಮಕೂರು, ನಾ.ಕು. ಗಣೇಶ್
ಬೆಂಗಳೂರು, ಕೆ. ಎಸ್. ವಿಠಲರಾವ್ ಬೆಂಗಳೂರು
ಹೆಚ್. ಆನಂದ್‌ಕುಮಾರ್, ಚಿತ್ರದುರ್ಗ

### ಮಕ್ಕಳ ಕಥೆ

ಎಳೆಯರ ಅಂಗಳದಲ್ಲಿ 'ದಡ್ಡ ಹುಡುಗ ದೊಡ್ಡ ವಿಜ್ಞಾನಿಯಾದ' (ಪ್ರೊ. ನಾಗರಾಜ ಅಂಗಡಿ) ಚೆನ್ನಾಗಿದೆ. ಹಿರಿಕಿರಿಯರೆಲ್ಲ ಓದಬೇಕಾದ ಕಥೆ.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದರೆ

### 103ರ ಕೌರ್ ಸಾಧನೆ

'ಮನ್‌ಸೂರೆಗೊಳ್ಳುವ ಕೌರ್...' (ಸುಶೀಲಾ ಡೋಣೂರ) 103ರ ಹಿರಿಯಜ್ಜಿ ಸಾಧನೆ ಹೆಮ್ಮೆ ಎನಿಸಿತು.

—ಕೋಟೇಶ್ವರ ಸೂರ್ಯನಾರಾಯಣ ರಾವ್,
ಬೆಂಗಳೂರು, ನಾರಾಯಾಣ ಯಾಜಿ, ಶಿರಾಲಿ


